ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-07-1971.

*ವಿಲ್ ಪವರ್ ಮತ್ತು ಕಂಟ್ರೋಲಿಂಗ್ ಪವರ್* (विल पावर और कंट्रोलिंग पावर)

ತಮ್ಮಲ್ಲಿ ವಿಲ್ ಪವರ್ ಮತ್ತು ಕಂಟ್ರೋಲಿಂಗ್ ಪವರ್ ಎರಡೂ ಶಕ್ತಿಗಳ ಅನುಭವ ಮಾಡುತ್ತಿದ್ದೀರಾ? ಏಕೆಂದರೆ ತಮ್ಮ ಪುರುಷಾರ್ಥಕ್ಕಾಗಿ ಹಾಗೂ ಅನ್ಯ ಆತ್ಮರ ಉನ್ನತಿಗಾಗಿ ಇವೆರಡೂ ಶಕ್ತಿಗಳು ಅತಿ ಅವಶ್ಯಕವಾಗಿದೆ. ಮತ್ತು ತಮ್ಮಲ್ಲಿಯೇ ಕಂಟ್ರೋಲಿಂಗ್ ಪವರ್ ಮತ್ತು ವಿಲ್ ಪವರ್ ಇಲ್ಲವೆಂದರೆ ಅನ್ಯರಿಗೂ ವಿಲ್(ಅರ್ಪಣೆ) ಮಾಡಿಸುವ ಶಕ್ತಿ ಬರುವುದಿಲ್ಲ. ಅನ್ಯರ ಯಾವ ವ್ಯರ್ಥಸಂಕಲ್ಪ ಹಾಗೂ ವ್ಯರ್ಥಚಲನೆ ಈಗಿನವರೆಗೂ ನಡೆಯುತ್ತಿದೆಯೋ ಅದನ್ನು ನೀವು ಕಂಟ್ರೋಲ್ ಮಾಡಿಸಲು ಸಾಧ್ಯವಿಲ್ಲ, ಏಕೆಂದರೆ ವಿಲ್‌ಪವರ್ ಇರುವುದಿಲ್ಲ. ವಿಲ್‌ಪವರ್ ಎಂದರೆ ಯಾವುದೇ ಸಂಕಲ್ಪ, ವಾಣಿ ಹಾಗೂ ಕರ್ಮದ ಮುಖಾಂತರ ಮಾಡಿರುವುದೆಲ್ಲವನ್ನೂ ತಂದೆಯ ಮುಂದೆ ವಿಲ್ ಅರ್ಥಾತ್ ಅರ್ಪಣೆ ಮಾಡಿಬಿಡಬೇಕು. ಹೇಗೆ ಭಕ್ತಿಮಾರ್ಗದಲ್ಲಿ ಏನೆಲ್ಲವನ್ನೂ ಮಾಡುವರೋ, ತಿನ್ನುವರೋ ನಡೆಯುವರೋ ಎಲ್ಲವನ್ನೂ ಈಶ್ವರಾರ್ಪಣೆ ಎಂದು ಹೇಳುತ್ತಾರೆ ಅದೂ ಬಾಹ್ಯವಾಗಿ, ಆದರೆ ಇಲ್ಲಿ ಈಗ ತಿಳಿದುಕೊಳ್ಳುತ್ತೀರಿ. ಏನೆಲ್ಲವನ್ನೂ ಮಾಡಿದೆವೋ ಅದು ಕಲ್ಯಾಣಕಾರಿ ತಂದೆಯ ಕಲ್ಯಾಣದ ಕರ್ತವ್ಯದ ಪ್ರತಿ ಅರ್ಪಣೆ ಮಾಡಿದೆವು ಎಂದು. ಯಾರು ಎಷ್ಟೆಷ್ಟು ಅರ್ಪಣೆ ಮಾಡುತ್ತಾ ಹೋಗುತ್ತಾರೆಯೋ ಅಂತಹವರು ಅರ್ಪಣಮಯ ದರ್ಪಣವಾಗಿಬಿಡುತ್ತಾರೆ. ಯಾವುದನ್ನು ಅರ್ಪಣೆ ಮಾಡಿದರೋ, ಯಾರಪ್ರತಿ ಅರ್ಪಣೆ ಮಾಡಿದರೋ ಅದೆಲ್ಲಾ ಸಾಕ್ಷಾತ್ಕಾರವು ಎಲ್ಲರಿಗೂ ಸ್ವತಹವಾಗಿ ದರ್ಪಣದಂತೆ ಆಗುತ್ತದೆ ಅಂದಮೇಲೆ ಅರ್ಪಣೆ ಮಾಡಿ ದರ್ಪಣವಾಗುವ ಪುರುಷಾರ್ಥ ಇದೇ ಆಗಿದೆ. ವಿಲ್ ಪವರ್ ಹಾಗೂ ಕಂಟ್ರೋಲಿಂಗ್ ಪವರ್ ಬೇಕಾಗಿದೆ. ಎಲ್ಲಿ ಬೇಕೋ ಅಲ್ಲಿ ತಮ್ಮನ್ನು ತಾವು ಅರ್ಥಾತ್ ತಮ್ಮ ಸ್ಥಿತಿಯನ್ನು ಸ್ಥಿತ ಮಾಡುವಂತಿರಬೇಕು. ಈ ರೀತಿಯಲ್ಲ- ತಮ್ಮ ಸ್ಥಿತಿಯನ್ನು ಸ್ಥಿತ ಮಾಡಿಕೊಳ್ಳಲು ತಂದೆಯ ನೆನಪಿನಲ್ಲಿ ಕುಳಿತುಕೊಂಡು ಅದು ಸ್ಥಿತಿಯ ಬದಲು ವ್ಯರ್ಥಸಂಕಲ್ಪ ಹಾಗೂ ಗೂಂದಲದ ಸ್ಥಿತಿ ಆಗುವಂತಾಗಬಾರದು. ಇದು ಕಂಟ್ರೋಲಿಂಗ್ ಪವರ್ ಆಗಲಿಲ್ಲ. ಒಂದುಕ್ಷಣಕ್ಕಿಂತಲೂ ಕಡಿಮೆ ಸಮಯದಲ್ಲಿ ತಮ್ಮ ಸಂಕಲ್ಪವನ್ನು ಎಲ್ಲಿ ಬೇಕೋ ಅಲ್ಲಿ ನಿಲ್ಲಿಸಬೇಕು. ಒಂದುವೇಳೆ ಸ್ವಯಂನ ಸ್ಥಿತಿಯನ್ನು ಸ್ಥಿತ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದರೆ ಅನ್ಯರನ್ನು ಆತ್ಮಿಕ ಸ್ಥಿತಿಯಲ್ಲಿ ಹೇಗೆ ಸ್ಥಿತ ಮಾಡಬಲ್ಲಿರಿ ಆದ್ದರಿಂದ ತಮ್ಮ ಸ್ಟೇಜ್ ಮತ್ತು ಸ್ಟೇಟಸ್ ಎರಡರ ಸ್ಮೃತಿ ಸದಾ ಇರಲಿ ಆಗಲೇ ಲಕ್ಷ್ಯದ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವಿರಿ. ಅಂದಮೇಲೆ ವಿಲ್ ಪವರ್ ಮತ್ತು ಕಂಟ್ರೋಲಿಂಗ್ ಪವರ್ ಎರಡಕ್ಕಾಗಿ ಮುಖ್ಯವಾಗಿ ಏನನ್ನು ನೆನಪಿಟ್ಟುಕೊಳ್ಳಬೇಕು ಅದರಿಂದ ಎರಡೂ ಶಕ್ತಿಗಳು ಬಂದುಬಿಡಬೇಕು. ಇವೆರಡೂ ಶಕ್ತಿಗಳಿಗಾಗಿ ಪುರುಷಾರ್ಥವೇನೆಂದರೆ,

ಕಂಟ್ರೋಲಿಂಗ್ ಪವರ್‌ಗಾಗಿ ಸದಾ ಮಹಾನ್ ಅಂತರವನ್ನು ಮುಂದಿಟ್ಟುಕೊಳ್ಳಿ ಆಗ ತಾನಾಗಿಯೇ ಯಾವುದು ಶ್ರೇಷ್ಠವಾಗಿರುವುದೊ ಅದರ ಕಡೆಯೇ ಬುದ್ಧಿ ಹೋಗುವುದು ಮತ್ತು ಯಾವುದು ವ್ಯರ್ಥವೆನಿಸುವುದೋ ಅದರ ಕಡೆ ಬುದ್ಧಿಯು ಹೋಗುವುದಿಲ್ಲ. ಏನೆಲ್ಲಾ ಕರ್ಮವನ್ನು ಮಾಡುತ್ತೀರೋ ಅದರಲ್ಲಿ ಮಹಾನ್ ಅಂತರವಾದ ಶುದ್ಧ ಮತ್ತು ಅಶುದ್ಧ, ಸತ್ಯ ಮತ್ತು ಅಸತ್ಯ, ಸ್ಮೃತಿ ಮತ್ತು ವಿಸ್ಮೃತಿಯ ಅಂತರವನ್ನು ಎದುರಿಗೆ ಇಟ್ಟುಕೊಂಡರೆ ಸ್ಥಿತಿ ಚೆನ್ನಾಗಿರುತ್ತದೆ. ವ್ಯರ್ಥ ಮತ್ತು ಸಮರ್ಥ ಸಂಕಲ್ಪದಲ್ಲಿ ಯಾವ ಅಂತರವಿದೆ, ಎಲ್ಲಾ ಮಾತುಗಳಲ್ಲಿ ಒಂದುವೇಳೆ ಮಹಾನ್ ಅಂತರವನ್ನು ನೋಡಿಕೊಳ್ಳುತ್ತಾ ಹೋಗುತ್ತೀರೆಂದರೆ ಬೇರೆ ಕಡೆ ಬುದ್ಧಿಯು ಹೋಗುವುದು ಅವಶ್ಯವಾಗಿ ನಿಂತುಹೋಗುವುದು ಮತ್ತು ಎಲ್‌ಪವರ್‌ಗಾಗಿ ಮಹಾಮಂತ್ರ ಬೇಕಾಗಿದೆ. ಒಂದುವೇಳೆ ಮಹಾನ್ ಅಂತರ ಮತ್ತು ಮಹಾಮಂತ್ರ ಇವೆರಡೂ ನೆನಪಿದ್ದರೆ ಬುದ್ಧಿಯನ್ನು ಕಂಟ್ರೋಲ್ ಮಾಡಲು ಎಂದೂ ಪರಿಶ್ರಮಪಡುವ ಅವಶ್ಯಕತೆಯಿಲ್ಲ. ಇದು ಸಹಜವಾಗಿದೆ. ಮೊದಲು ಪರಿಶೀಲಿಸಿಕೊಳ್ಳಿ ಅರ್ಥಾತ್ ಅಂತರವನ್ನು ನೋಡಿ, ನಂತರ ಕರ್ಮ ಮಾಡಿ, ಅಂತರವನ್ನು ನೋಡದೆ ಆಲಸ್ಯದಿಂದ ನಡೆಯುತ್ತಿದ್ದರೆ ಕಂಟ್ರೋಲಿಂಗ್ ಪವರ್ ಬರುವುದಿಲ್ಲ ಮತ್ತು ಮಹಾಮಂತ್ರದಿಂದ ವಿಲ್ ಪವರ್ ತಾನಾಗಿಯೇ ಬಂದುಬಿಡುವುದು ಏಕೆಂದರೆ ಮಹಾಮಂತ್ರವಾಗಿದೆ ತಂದೆಯ ನೆನಪು ಅರ್ಥಾತ್ ತಂದೆಯ ಜೊತೆ ತಂದೆಯ ಕರ್ತವ್ಯದ ಜೊತೆ,

ತಂದೆಯ ಗುಣಗಳ ಜೊತೆ ಸದಾ ತನ್ನಬುದ್ಧಿಯನ್ನು ತಂದೆಯ ಜೊತೆ ಸ್ಥಿತ ಮಾಡುವುದು. ಅಂದಾಗ ಮಹಾಮಂತ್ರವು ಬುದ್ಧಿಯಲ್ಲಿದ್ದರೆ ಅರ್ಥಾತ್ ಬುದ್ಧಿಯ ಕನೆಕ್ಷನ್ ಪವರ್‌ಹೌಸ್‌ನೊಂದಿಗಿರುವ ಕಾರಣ ವಿಲ್ ಪವರ್ ಬಂದುಬಿಡುತ್ತದೆ. ಆದ್ದರಿಂದ ಮಹಾಮಂತ್ರ ಮತ್ತು ಮಹಾನ್ ಅಂತರ- ಇವರೆಡರ ನೆನಪಿದ್ದರೆ ಎರಡೂ ಶಕ್ತಿಗಳು ಸಹಜವಾಗಿ ಬಂದುಬಿಡುತ್ತವೆ. ಮಹಾಮಂತ್ರ ಮತ್ತು ಮಹಾನ್ ಅಂತರ ಎರಡನ್ನೂ ಸ್ಮೃತಿಯಲ್ಲಿಟ್ಟುಕೊಂಡು ಜ್ಞಾನದ ನೇತ್ರವನ್ನು ನಡೆಸಿದಾಗ ಎಷ್ಟು ಸಫಲತೆಯಾಗುತ್ತದೆ ಎಂಬುದನ್ನು ನೋಡುವಿರಿ. ಹೇಗೆ ಮೊದಲೇ ತಿಳಿಸಿದ್ದೆವು- ಹಂಸದ ಕರ್ತವ್ಯವೇನು ಎಂದು. ಅದು ಸದಾ ಕಲ್ಲು ಹಾಗೂ ರತ್ನಗಳ ಮಹಾನ್ ಅಂತರವನ್ನು ಗುರುತಿಸುತ್ತದೆ. ಹಾಗೆಯೇ ಬುದ್ಧಿಯಲ್ಲಿ ಸದಾ ಮಹಾನ್ ಅಂತರ ನೆನಪಿದ್ದರೆ ಮಹಾಮಂತ್ರವೂ ಸಹಜವಾಗಿ ನೆನಪಿಗೆ ಬರುವುದು. ಯಾವುದೇ ಶ್ರೇಷ್ಠವಾದ ಮಾತನ್ನು ಅರಿತುಕೊಂಡರೆ ಅವರು ಕೆಳಗಿನ ಮಾತುಗಳಿಂದ ಸ್ವತಹವಾಗಿ ದೂರವಾಗುತ್ತಾರೆ. ಆದರೆ ಅಂತರ ನೆನಪಿಲ್ಲದಿರುವ ಕಾರಣ ಮಂತ್ರವು ಮರೆತುಹೋಗುತ್ತದೆ ಜೊತೆಗೆ ಜ್ಞಾನದ ಯಾವ ಯಂತ್ರವು ಸಿಕ್ಕಿದೆಯೋ ಅದು ಪೂರ್ಣರೀತಿಯಿಂದ ಸಫಲವಾಗುವುದಿಲ್ಲ. ಅಂದಮೇಲೆ ಈಗೇನು ಮಾಡುತ್ತೀರಿ? ಕೇವಲ ಎರಡು ಶಬ್ದಗಳನ್ನು ನೆನಪಿಟ್ಟುಕೊಳ್ಳಿರಿ- ಹಂಸವಾಗಿ ಮಾಡುತ್ತಾ ಹೋಗಿ, ತಿಳಿಯಿತೆ. ಹೇಗೆ ಬಾಪ್ ದಾದಾರವರ ಮೂರುಮುಖ್ಯ ಸಂಬಂಧಗಳಿವೆ. ವಾಸ್ತವದಲ್ಲಿ ಸರ್ವಸಂಬಂಧವಿದೆ ಆದರೂ ಮುಖ್ಯವಾದದು ಮೂರುಸಂಬಂಧಗಳಲ್ಲವೆ. ಹಾಗೆಯೇ ಇಡೀದಿನ ಒಳಗಡೆ ತಮ್ಮ ಮೂರುಮುಖ್ಯ ರೂಪಗಳು ತಮಗೆ ನೆನಪಿರಬೇಕು. ಹೇಗೆ ಬಾಲ್ಯಾವಸ್ಥೆ, ಯುವಾವಸ್ಥೆ ಹಾಗೂ ವೃದ್ಧಾವಸ್ಥೆ ಇರುತ್ತದೆ ನಂತರ ಮೃತ್ಯುವಾಗುತ್ತದೆ. ಈ ಚಕ್ರವು ನಡೆಯುತ್ತದೆಯಲ್ಲವೆ ಹಾಗೆಯೇ ಇಡೀ ದಿನದಲ್ಲಿ ಮೂರು ಯಾವ ರೂಪಗಳನ್ನು ನೆನಪಿಟ್ಟುಕೊಳ್ಳುತ್ತೀರಿ? ಅದರಿಂದ ಸ್ಮೃತಿಯು ಸಹಜವಾಗಿರಬೇಕು ಮತ್ತು ಹೆಚ್ಚು ಸಫಲತೆಯೂ ಆಗುವಂತಿರಬೇಕು. ಹೇಗೆ ತಂದೆಯ ಈ ಮೂರು ರೂಪಗಳನ್ನೂ ವರ್ಣನೆ ಮಾಡುತ್ತೀರೋ ಹಾಗೆಯೇ ತಮ್ಮ ಮೂರುರೂಪಗಳು ಯಾವವು? ಬೆಳಗ್ಗೆ ಬೆಳಗ್ಗೆ ಅಮೃತವೇಳೆ ಎದ್ದಾಗ ನೆನಪಿನ ಯಾತ್ರೆಯಲ್ಲಿರುತ್ತೀರಿ ಹಾಗೂ ವಾರ್ತಲಾಪ ಮಾಡುತ್ತೀರೆಂದರೆ ಆ ಸಮಯದ ರೂಪ ಯಾವುದಾಗಿರುತ್ತದೆ? ಬಾಲಕ್ ಸೋ ಮಾಲೀಕ್. ವಾರ್ತಾಲಾಪ ಮಾಡುವಾಗ ಬಾಲಕನ ರೂಪ ನೆನಪಿರುತ್ತದೆಯಲ್ಲವೆ ಮತ್ತು ಯಾವಾಗ ನೆನಪಿನ ಯಾತ್ರೆಯ ಅನುಭವ ರೂಪವಾಗುತ್ತೀರೋ ಆಗ ಮಾಲೀಕತನದ ರೂಪವಿರುತ್ತದೆ. ಅಂದಮೇಲೆ ಅಮೃತವೇಳೆಯ ರೂಪವಾಗಿದೆ- ಬಾಲಕ ಸೋ ಮಾಲೀಕತನದ ರೂಪ, ನಂತರ ಯಾವ ರೂಪವಿರುತ್ತದೆ? ಈಶ್ವರೀಯ ವಿದ್ಯಾರ್ಥಿ ಜೀವನ, ಅನಂತರ ಮೂರನೇ ರೂಪ ಸೇವಾಧಾರಿಯದಾಗಿದೆ. ಈ ಮೂರೂರೂಪಗಳನ್ನು ಇಡೀ ದಿನದಲ್ಲಿ ಧಾರಣೆ ಮಾಡುತ್ತಾ ಕರ್ತವ್ಯ ಮಾಡುತ್ತಾ ನಡೆಯುತ್ತೀರಾ? ಈ ಮೂರೂರೂಪಗಳಿರುತ್ತವೆ. ನಂತರ ರಾತ್ರಿಗೆ ಯಾವ ರೂಪವಾಗುತ್ತದೆ? ಅಂತ್ಯದಲ್ಲಿ ರಾತ್ರಿ ಮಲಗುವ ಸಮಯದ ಸ್ಥಿತಿ ಏನೆಂದರೆ ತಮ್ಮನ್ನು ಪರಿಶೀಲನೆ ಮಾಡಿಕೊಳ್ಳುವುದು. ಜೊತೆಜೊತೆಗೆ ವಾಣಿಯಿಂದ ದೂರ ಹೋಗುವ ಸ್ಥಿತಿಯಿರುತ್ತದೆ. ಆ ಸ್ಥಿತಿಯಲ್ಲಿ ಸ್ಥಿತರಾಗಿ ಒಂದುದಿನವನ್ನು ಸಮಾಪ್ತಿ ಮಾಡುತ್ತೀರಿ ನಂತರ ಮತ್ತೊಂದು ದಿನವು ಪ್ರಾರಂಭವಾಗುತ್ತದೆ ಅಂದಮೇಲೆ ಆ ಸ್ಥಿತಿಯು ಹೇಗಿರಬೇಕೆಂದರೆ ಹೇಗೆ ಒಳ್ಳೆಯ ನಿದ್ರೆಯಲ್ಲಿದ್ದಾಗ ಈ ಪ್ರಪಂಚದ ಯಾವುದೇ ಮಾತು, ಯಾವುದೇ ಶಬ್ದ, ಯಾವುದೇ ಆಕರ್ಷಣೆಯಾಗುವುದಿಲ್ಲ, ಸ್ವಪ್ನದ ಮಾತು ಬೇರೆಯಾಗಿದೆ. ಹೀಗೆ ಮಲಗುವ ಮೊದಲು ಈ ರೀತಿಯ ಸ್ಥಿತಿಯನ್ನು ಮಾಡಿಕೊಂಡು ನಂತರ ಮಲಗಬೇಕು. ಹೇಗೆ ಅಂತ್ಯದಲ್ಲಿ ಯಾರು ಯಾವ ಸಂಸ್ಕಾರವನ್ನು ತೆಗೆದುಕೊಂಡು ಹೋಗುವರೋ ಅದೇ ಸಂಸ್ಕಾರವು ಮರ್ಜ್ ಆಗಿ ನಂತರದ ಜನ್ಮದಲ್ಲಿ ಅದೇ ಸಂಸ್ಕಾರವು ಇಮರ್ಜ್ ಆಗುತ್ತದೆ. ಅದೇರೀತಿ ಇಲ್ಲಿಯೂ ದಿನವನ್ನು ಸಮಾಪ್ತಿ ಮಾಡುವಾಗ (ರಾತ್ರಿಯಲ್ಲಿ) ಸಂಸ್ಕಾರವು ನ್ಯಾರಾ ಮತ್ತು ಪ್ಯಾರಾ ಸ್ಥಿತಿಯದಾಗಬೇಕಲ್ಲವೆ. ಇದೇ ಸಂಸ್ಕಾರದಿಂದ ಮಲಗಿದಾಗ ನಂತರದ ದಿನವೂ ಸಹ ಈ ಸಂಸ್ಕಾರಗಳ ಸಹಯೋಗ ಸಿಗುತ್ತದೆ. ಆದ್ದರಿಂದ ರಾತ್ರಿಯ ಸಮಯದಲ್ಲಿ ದಿನವನ್ನು ಸಮಾಪ್ತಿ ಮಾಡುವಾಗ ನೆನಪಿನ ಅಗ್ನಿಯಿಂದ ಹಾಗೂ ಸ್ಮೃತಿಯ ಶಕ್ತಿಯಿಂದ ಹಳೆಯ ಖಾತೆಯನ್ನು ಸಮಾಪ್ತಿ ಮಾಡಿಬಿಡಬೇಕು. ಲೆಕ್ಕಾಚಾರವನ್ನು ಚುಕ್ತ ಮಾಡಬೇಕು. ಹೇಗೆ ವ್ಯಾಪಾರಿಗಳೂ ಸಹ ಒಂದುವೇಳೆ ಲೆಕ್ಕವನ್ನು ಚುಕ್ತ ಮಾಡದಿದ್ದರೆ ಖಾತೆಯೂ ಹೆಚ್ಚಾಗಿಬಿಡುತ್ತದೆ ಮತ್ತು ಸಾಲಗಾರರಾಗಿಬಿಡುತ್ತಾರೆ. ಹಾಗೆಯೇ ಒಂದುವೇಳೆ ಇಡೀ ದಿನ ಮಾಡಿರುವ ಕರ್ಮಗಳ ಖಾತೆ ಹಾಗೂ ಸಂಕಲ್ಪಗಳ ಖಾತೆ ಏನೆಲ್ಲವೂ ಆಯಿತೋ ಅದನ್ನು ಚುಕ್ತ ಮಾಡಿಬಿಡಿ ನಂತರದ ದಿನಕ್ಕಾಗಿ ಸಾಲದ

ರೀತಿಯಲ್ಲಿ ಇಟ್ಟುಕೊಳ್ಳಬೇಡಿ. ಇಲ್ಲದಿದ್ದರೆ ಅದೇ ಮರ್ಜ್ನ ರೂಪದಲ್ಲಿ ಬುದ್ಧಿಯನ್ನು ಬಲಹೀನ ಮಾಡಿಬಿಡುತ್ತದೆ. ಪ್ರತಿನಿತ್ಯ ತಮ್ಮ ಲೆಕ್ಕಾಚಾರವನ್ನು ಚುಕ್ತಾ ಮಾಡಿ ಹೊಸದಿನ, ಹೊಸಸ್ಮೃತಿಯಿರಲಿ. ಹೀಗೆ ಯಾವಾಗ ತನ್ನ ಕರ್ಮಗಳು ಹಾಗೂ ಸಂಕಲ್ಪಗಳ ಖಾತೆಯನ್ನು ಸ್ಪಷ್ಟವಾಗಿ ಇಟ್ಟು ಕೊಳ್ಳುತ್ತೀರೋ ಆಗ ಸಂಪೂರ್ಣ ಹಾಗೂ ಸಫಲತಾಮೂರ್ತಿಯಾಗಿ ಬಿಡುತ್ತೀರಿ. ಒಂದುವೇಳೆ ತಮ್ಮದೇ ಲೆಕ್ಕವನ್ನು ಚುಕ್ತ ಮಾಡಲಾಗದಿದ್ದರೆ ಅನ್ಯರ ಕರ್ಮಬಂಧನ ಹಾಗೂ ಅನ್ಯರ ಲೆಕ್ಕಾಚಾರಗಳನ್ನು ಹೇಗೆ ಚುಕ್ತಾ ಮಾಡಿಸುವಿರಿ? ಆದ್ದರಿಂದ ಪ್ರತಿನಿತ್ಯ ರಾತ್ರಿ ತಮ್ಮ ರಿಜಿಸ್ಟರ್‌ನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಏನಾಯಿತೋ ಅದನ್ನು ಯೋಗಾಗ್ನಿಯಲ್ಲಿ ಭಸ್ಮ ಮಾಡಿರಿ. ಹೇಗೆ ಮುಳ್ಳುಗಳನ್ನು ಭಸ್ಮಮಾಡಿ ಅದರ ಹೆಸರಿಲ್ಲದಂತೆ ಸಮಾಪ್ತಿ ಮಾಡುತ್ತೀರಲ್ಲವೆ ಅದೇರೀತಿ ತಮ್ಮ ಜ್ಞಾನದ ಶಕ್ತಿ ಹಾಗೂ ನೆನಪಿನ ಶಕ್ತಿ, ವಿಲ್ ಪವರ್ ಮತ್ತು ಕಂಟ್ರೋಲಿಂಗ್ ಪವರ್‌ನಿಂದ ತಮ್ಮ ರಿಜಿಸ್ಟರ್‌ನ್ನು ನಿತ್ಯವೂ ಸ್ವಚ್ಛವಾಗಿಟ್ಟುಕೊಳ್ಳಬೇಕು. ಸಂಗ್ರಹಣೆಯಾಗ ಬಾರದು. ಒಂದುದಿನ ಮಾಡಿರುವ ವ್ಯರ್ಥಸಂಕಲ್ಪ ಹಾಗೂ ವ್ಯರ್ಥಕರ್ಮದ ರೇಖೆ ಇನ್ನೊಂದು ದಿನ ಅಂಶಮಾತ್ರವೂ ಇರಬಾರದು ಅರ್ಥಾತ್ ಸಾಲವನ್ನು ಉಳಿಸಿಕೊಳ್ಳಬಾರದು. ಕಳೆದದ್ದು ಕಳೆದುಹೋಯಿತು, ಫುಲ್ ಸ್ಟಾಪ್. ಹೇಗೆ ರಿಜಿಸ್ಟರ್‌ನ್ನು ಸ್ವಚ್ಛವಾಗಿಟ್ಟುಕೊಳ್ಳುವವರು ಹಾಗೂ ಲೆಕ್ಕವನ್ನು ಚುಕ್ತಾ ಮಾಡುವವರು ಸಹಜವಾಗಿ ಸಫಲತಾಮೂರ್ತಿಗಳಾಗುತ್ತಾರೆ. ತಿಳಿಯಿತೆ- ಇಡೀ ದಿನದ ಚಕ್ಕರ್(ಪರಿಶೀಲಕರು) ಆಗಿರಿ.

ಸ್ವದರ್ಶನ ಚಕ್ರದ ಒಳಗಡೆ ಇದೂ ಸಹ ಒಂದುದಿನದ ಚಕ್ರ, ಹೇಗೆ ಯಜ್ಞದ ಆರಂಭದಲ್ಲಿ ಡ್ರಿಲ್ ಮಾಡುತ್ತಿದ್ದರು. ಚಕ್ರದ ಒಳಗಿನ ಚಕ್ರದಲ್ಲಿ ಹೋಗುತ್ತಿದ್ದರು. ಮತ್ತೆ ಅದರಿಂದ ಹೊರಗಡೆ ಹೋಗುತ್ತಿದ್ದರು. ಹಾಗೆಯೇ ಇದು ಬೇಹದ್ದಿನ 5000 ವರ್ಷಗಳ ಚಕ್ರವಾಗಿದೆ. ಆ ಚಕ್ರದಲ್ಲಿ ಇನ್ನೂ ಚಿಕ್ಕ-ಚಿಕ್ಕ ಚಕ್ರಗಳಿವೆ ಅಂದಮೇಲೆ ತಮ್ಮ ಆ ದಿನಚರ್ಯದ ಚಕ್ರವು ಸದಾ ಸ್ಪಷ್ಟವಾಗಿರಲಿ.ಗೊಂದಲವಿರಬಾರದು. ಆಗ ಚಕ್ರವರ್ತಿ ರಾಜರಾಗುವಿರಿ. ರಿಜಿಸ್ಟರ್‌ನ್ನು ಸ್ವಚ್ಛ ಮಾಡುವುದು ಬರುತ್ತದೆಯಲ್ಲವೆ. ಇತ್ತೀಚೆಗೆ ವಿಜ್ಞಾನವೂ ಸಹ ಅಂತಹ ಅನ್ವೇಷಣೆ ನಡೆಸಿದೆ, ಬರವಣಿಗೆಯೂ ಈ ರೀತಿ ಅಳಿಸಿ ಹೋಗುತ್ತದೆ ಮತ್ತೆ ಗೊತ್ತಾಗುವುದೇ ಇಲ್ಲ. ಅಂದಮೇಲೆ ಶಾಂತಿಯ ಶಕ್ತಿಯಿಂದ ತಮ್ಮ ರಿಜಿಸ್ಟರ್‌ನ್ನು ನಿತ್ಯವೂ ಸ್ವಚ್ಛ ಮಾಡಿಕೊಳ್ಳಲು ಸಾಧ್ಯವಿಲ್ಲವೆ? ಆದ್ದರಿಂದಲೇ ಹೇಳಲಾಗಿದೆ- ತಂದೆಗೆ ಪ್ರಿಯರು ಅಥವಾ ಪ್ರಭುಪ್ರಿಯರು ಹಾಗೂ ದೈವೀಲೋಕ ಎರಡಕ್ಕೂ ಯಾರು ಪ್ರಿಯರಾಗಲು ಸಾಧ್ಯ? ಸತ್ಯತೆ ಹಾಗೂ ಸ್ವಚ್ಛತೆಯುಳ್ಳವರು ಪ್ರಭುಪ್ರಿಯರೂ ಆಗಿದ್ದಾರೆ ಮತ್ತು ಲೋಕಪ್ರಿಯರೂ ಹಾಗೂ ಸ್ವಯಂಗೂ ಪ್ರಿಯರಾಗುತ್ತಾರೆ. ಸತ್ಯತೆ- ಸ್ವಚ್ಛತೆಯನ್ನು ಎಲ್ಲರೂ ಇಷ್ಟಪಡುತ್ತಾರೆ. ರಿಜಿಸ್ಟರ್‌ನ್ನು ಸ್ವಚ್ಛವಾಗಿಟ್ಟು ಕೊಳ್ಳುವುದೂ ಸಹ ಸ್ವಚ್ಛತೆಯಾಯಿತಲ್ಲವೆ. ಸತ್ಯಹೃದಯದವರ ಮೇಲೆ ಸಾಹೇಬನು(ಶಿವಬಾಬಾ) ರಾಜಿಯಾಗುತ್ತಾನೆ ಅರ್ಥಾತ್ ಸಾಹಸ ಮತ್ತು ನೆನಪಿನಿಂದ ಸಹಯೋಗ ಸಿಗುತ್ತದೆ. ಒಳ್ಳೆಯದು.

ಅವ್ಯಕ್ತ ಮುರಳಿ18-07-1971.

***ವಿಲ್ ಪವರ್ ಮತ್ತು ಕಂಟ್ರೋಲಿಂಗ್ ಪವರ್***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

***ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.***

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ಸ್ವ ಪುರುಷಾರ್ಥಕ್ಕಾಗಿ ಮತ್ತು ಇತರರ ಉನ್ನತಿಗಾಗಿ 'ವಿಲ್ ಪವರ್ ಮತ್ತು ಕಂಟ್ರೋಲಿಂಗ್ ಪವರ್' - ಈ ಎರಡು ಶಕ್ತಿಗಳನ್ನು ಧಾರಣೆ ಮಾಡಿ ವ್ಯರ್ಥ ಸಂಕಲ್ಪಗಳನ್ನು ವ್ಯರ್ಥ ನಡವಳಿಕೆಯನ್ನು ಸಮಾಪ್ತಿ ಮಾಡಿದ್ದೇನೆ.

2. ನಾನು ಯಾವುದೇ ಸಂಕಲ್ಪವನ್ನು ಮಾಡಿದರೂ, ಮಾತನಾಡಿದರೂ ಅಥವಾ ಕರ್ಮ ಮಾಡಿದರೂ ಎಲ್ಲವನ್ನೂ ತಂದೆಯ ಮುಂದೆ ಅರ್ಪಣೆ ಮಾಡಿ ದರ್ಪಣವಾಗಿ ಎಲ್ಲರಿಗೂ ಸಾಕ್ಷಾತ್ಕಾರವನ್ನು ಮಾಡಿಸಿರುವ ಸಾಕ್ಷಾತ್ಕಾರ ಮೂರ್ತಿ.

3. ನಾನು ಒಂದು ಕ್ಷಣದಲ್ಲಿ ಸ್ವಯಂ ಅನ್ನು ಮತ್ತು ಇತರರನ್ನು ಎಲ್ಲಿ ಬೇಕೋ ಅಲ್ಲಿ ಸ್ಥಿತ ಮಾಡಬಲ್ಲ ಕಂಟ್ರೋಲಿಂಗ್ ಪವರ್ ಸ್ವರೂಪ.

4. ನಾನು ಸ್ಥಿತಿ ಮತ್ತು ಪದವಿಯನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಗುರಿಯನ್ನು ತಲುಪಿದ್ದೇನೆ.

5. ನಾನು ಕಂಟ್ರೋಲಿಂಗ್ ಪವರ್ ಗಾಗಿ ಮಹಾ ಅಂತರವನ್ನು (ವ್ಯರ್ಥ, ಸಮರ್ಥದ ವ್ಯತ್ಯಾಸ) ವಿಲ್ ಪವರ್ ಗಾಗಿ ಮಹಾಮಂತ್ರವನ್ನು ಬುದ್ಧಿಯಲ್ಲಿಟ್ಟುಕೊಂಡು, ಬುದ್ಧಿಯ ಸಂಬಂಧವನ್ನು ತಂದೆಯೊಂದಿಗೆ ಜೋಡಿಸಿ ಜ್ಞಾನ ನೇತ್ರದಿಂದ ಶಕ್ತಿಗಳನ್ನು ಸ್ವತಹವಾಗಿ ಪಡೆದಿರುವ ಸಫಲತಾ ಸ್ವರೂಪ.

6. ನಾನು ತಂದೆಯೊಂದಿಗೆ ಮೂರು ಸಂಬಂಧಗಳನ್ನು (ತಂದೆ, ಶಿಕ್ಷಕ ಮತ್ತು ಸದ್ಗುರು) ಸಹಜವಾಗಿ ಸ್ಮೃತಿಯಲ್ಲಿಟ್ಟುಕೊಂಡು ಸಫಲತೆಯನ್ನು ಪಡೆದಿದ್ದೇನೆ.

7. ನಾನು ಅಮೃತ ವೇಳೆಯಲ್ಲಿ ತಂದೆಯೊಂದಿಗೆ ಬಾಲಕ ಮತ್ತು ಮಾಲಿಕನ ರೂಪ, ಈಶ್ವರೀಯ ವಿದ್ಯಾರ್ಥಿಯ ರೂಪ ನಂತರ ಸೇವಾದಾರಿಯ ರೂಪವನ್ನು ಧಾರಣೆ ಮಾಡಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

8. ನಾನು ದಿನವನ್ನು ಸಮಾಪ್ತಿ ಮಾಡುವಾಗ ಸ್ಮೃತಿ ಎಂಬ ಅಗ್ನಿಯಲ್ಲಿ ಸ್ಮೃತಿ ಶಕ್ತಿಯೊಂದಿಗೆ ಆ ದಿನದ ಖಾತೆ (ಕರ್ಮ ಮತ್ತು ಸಂಕಲ್ಪಗಳ) ಸಮಾಪ್ತಿ ಮಾಡಿಕೊಂಡು ಸಂಪೂರ್ಣವಾಗಿ ತಯಾರಾಗಿದ್ದೇನೆ.

9. ನಾನು ನನ್ನ ಜ್ಞಾನ ಶಕ್ತಿಯಿಂದ ಮತ್ತು ಯೋಗ ಶಕ್ತಿಯಿಂದ ವಿಲ್ ಪವರ್ ಮತ್ತು ಕಂಟ್ರೋಲಿಂಗ್ ಪವರ್ ನೊಂದಿಗೆ ನನ್ನ ರಿಜಿಸ್ಟರ್ ಅನ್ನು ದಿನವೂ ಸ್ವಚ್ಛವಾಗಿ ಇಟ್ಟುಕೊಳ್ಳುವ ಸಫಲತಾ ಸ್ವರೂಪ.

10. ನಾನು ಎಲ್ಲಾ ಚಕ್ರಗಳಿಂದ ಮುಕ್ತವಾದ ಸ್ವದರ್ಶನ ಚಕ್ರಧಾರಿ ಆಗಿದ್ದೇನೆ.